# ECHO OF HIS CALL

# ಕರೆಯ ಪ್ರತಿಧ್ವನಿ

KANNADA

REACHING NATIONS

India's National Spiritual Newspaper

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXV | NOVEMBER 2023 | No. 10




## ಪರಿಶುದ್ಧ ಸತ್ಯವೇದ

ಈ ಕೆಳಗಿನ ವಚನಗಳನ್ನು ದಯಮಾಡಿ ಕಂಠ ಪಾಠ ಮಾಡಿರಿ.

ಕೀರ್ತನೆ 138:1-8

1. ಯೆಹೋವನೇ, ಪೂರ್ಣ ಮನಸ್ಸಿನಿಂದ ನಿನ್ನನ್ನು ಕೊಂಡಾಡುವೆನು; ದೇವರು ಗಳೆದುರಿನಲ್ಲಿ ನಿನ್ನನ್ನು ಕೀರ್ತಿಸುವೆನು.
2. ನಿನ್ನ ಪರಿಶುದ್ದಾಲಯದ ಕಡೆಗೆ ಅಡ್ಡ ಬೀಳುತ್ತೇನೆ; ನಿನ್ನ ಕೃಪೆ, ಸತ್ಯತೆ ಇವುಗಳಿಗೋಸ್ಕರ ನಿನ್ನ ನಾಮವನ್ನು ಕೊಂಡಾಡುತ್ತೇನೆ. ವಾಗ್ದಾನವನ್ನು ವಿಶೇಷ ರೀತಿಯಿಂದ ನೆರವೇರಿಸಿ ನಿನ್ನ ನಾಮ ಮಹತ್ತನ್ನು ಹೆಚ್ಚಿಸಿದ್ದೀ.
3. ನಾನು ಮೊರೆಯಿಟ್ಟಾಗ ಸದುತ್ತರವನ್ನು ದಯಪಾಲಿಸಿದಿ; ನನ್ನ ಆತ್ಮಕ್ಕೆ ಬಲಕೊಟ್ಟು ನನ್ನನ್ನು ಧೈರ್ಯಪಡಿಸಿದ್ದೀ.
4. ಯೆಹೋವನೇ, ಭೂರಾಜರೆಲ್ಲರು ನೀನು ಉಸಿರಿದ ನುಡಿಗಳನ್ನು ಕೇಳಿ ನಿನ್ನನ್ನು ಸ್ತುತಿಸುವರು;
5. ಅವರು ಯೆಹೋವನ ಮಾರ್ಗಗಳನ್ನು ಹಾಡಿಹರಸುವರು; ಯೆಹೋವನ ಪ್ರಭಾವವು ದೊಡ್ಡದಾಗಿದೆಯಲ್ಲಾ.
6. ಯೆಹೋವನು ಮಹೋನ್ನತನು; ಆದರೂ ದೀನರನ್ನು ಲಕ್ಷಿಸುತ್ತಾನೆ; ಗರ್ವಿಷ್ಠರನ್ನು ದೂರದಿಂದಲೇ ಗುರುತು ಹಿಡಿಯುತ್ತಾನೆ.
7. ನಾನು ಇಕ್ಕಟ್ಟಿನ ದಾರಿಯಲ್ಲಿ ನಡೆಯುವಾಗ ನನ್ನನ್ನು ಚೈತನ್ಯಗೊಳಿಸುವಿ; ನನ್ನ ಶತ್ರುಗಳ ಕೋಪಕ್ಕೆ ವಿರೋಧವಾಗಿ ನಿನ್ನ ಕೈ ಚಾಚುವಿ; ನಿನ್ನ ಬಲಗೈ ನನ್ನನ್ನು ರಕ್ಷಿಸುವದು.
8. ಯೆಹೋವನು ನನ್ನ ಕಾರ್ಯವನ್ನು ಸಿದ್ಧಿಗೆ ತರುವನು. ಯೆಹೋವನೇ, ನಿನ್ನ ಕೃಪೆಯು ಶಾಶ್ವತ ವಾದದ್ದು; ನೀನು ಕೈಹಚ್ಚಿದ ಕೆಲಸವನ್ನು ನೆರವೇರಿಸದೆ ಬಿಡಬೇಡ.

# ನಿಮ್ಮ ಯುದ್ಧವನ್ನು ಅರಿಸಿಕೊಳ್ಳಿರಿ !

## RECOGNIZE YOUR BATTLE FIELD!

- ಘನ. ಎಂಜಿಲಿನ್ ಸೆಲ್ವಕುಮಾರಿ



ಇತ್ತೀಚೆಗೆ, ನಾನು ನನ್ನ ಕುಟುಂಬದೊಂದಿಗೆ ಬಹಳ ದಿನದಲ್ಲಿ ಅವರನ್ನು ನೋಡದೆ ಇರುವ ಕಾರಣ, ನನ್ನ ಗೆಳೆಯನನ್ನು ಭೇಟಿಯಾಗುವದಕ್ಕೆ ಹೋಗಿದ್ದೇನು. ಭೇಟಿಯ ಬಗ್ಗೆ ನಾನು ತುಂಬಾ ಉತ್ಸುಕನಾಗಿದ್ದೆ. ಏನೇ ಹಾಗಲಿ, ಹೊಸ ರಸ್ತೆಗಳು ಮತ್ತು ತಿರುವಗಳಿಂದ, ನನ್ನ ಮಾರ್ಗಗಳಿಗೆ ನಾನು ಗೂಗಲ್ ಮ್ಯಾಪ್ ಮೇಲೆ ಆತು ಕೊಂಡೆನು. ಆಶ್ಚರ್ಯ ರೀತಿಯಲ್ಲಿ, ನಾನು ಕಳೆದು ಕೊಂಡು ತಪ್ಪಿಸಿಕೊಂಡೆನು. ನಾನು ಹೇಳಲೇಬೇಕು, ಗೂಗಲ್ ನಕ್ಷೆಗಳಿಗೆ ಎಲ್ಲಾ ಗೌರವಗಳೊಂದಿಗೆ, ಅದು ನನಗೆ ಉತ್ತಮ ಮಾರ್ಗದಲ್ಲಿ ಮಾರ್ಗದರ್ಶನ ನೀಡಲು ಪ್ರಯತ್ನಿಸುತ್ತಿದೆ, ಆದರೆ ನಿಜವಾದ ಮಾರ್ಗವು ಸೂಕ್ತವಲ್ಲ. ನಾನು ವಲಯಗಳಲ್ಲಿ ಹೋಗುತ್ತಿದ್ದೆನು ಮತ್ತು ನನಗೆ ತಡವಾಗುತ್ತದೆ ಎಂದು ಅನಿಸಿತು. ನಾನು ನನ್ನ ತಾಳ್ಮೆಯನ್ನು ಕಳೆದುಕೊಳ್ಳುವದಕ್ಕೆ ಪ್ರಾರಂಭಿಸಿದೆನು.

ನಿಮ್ಮಲ್ಲಿ ಹಲವರು ಈ ಅನುಭವಕ್ಕೆ ಸಂಬಂಧಿಸಿರಬಹುದು ಎಂದು ನಾನು ನಂಬುತ್ತೇನೆ. ಟ್ರಾಫಿಕ್ ಲೈಟ್‌ಗೆ ಕಾಯುತ್ತಿರುವಾಗ, ಅನಿಶ್ಚಿತ ವಾತಾವರಣವು ಮುಂದೆ ಬಂದಾಗ ಅಥವಾ ಗೂಗಲ್‌ನ

(3ನೇ ಪುಟಕ್ಕೆ)




**Echo of His Call**

*Christian YouTube Channel!*

**An opportunity to pray with Pr. S. Sam Selva Raj!**

Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

# ECHO OF HIS CALL - (1969-2019 GOLDEN JUBILEE YEAR)



## *from your dearly beloved brother...*



### OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Angeline S. Kumari, M.A., M.Sc., M.Ed.
MANAGING EDITOR
Pastor Alex Samson Sam, B.Th., M.Div.
GENERAL MANAGER
Bro. N. Prakasam, M.A., M.Sc.(C&P), PGDHRM, MBA.
ADMINISTRATION
Sis. Jesy Veena Sam
Bro. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Sis. Serena Bevin, M.A., M.Phil., B.Ed.
Sis. Sajini Cherian
Sis. L. Mariya Anjalin, M.A., M.Sc., B.Ed.
Rev. Dr. K.R. Rajasekaran
EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858
95661 31858
E.MAIL ID
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.com
YOUTUBE CHANNEL
Echo of His Call

**ದೇವರಿಂದ ಕರೆಯಲ್ಪಟ್ಟ ನಿಮಗೆ ಕರುಣೆಯೂ ಶಾಂತಿಯೂ ಪ್ರೀತಿಯೂ ಹೆಚ್ಚಾಗಲಿ. ಯೂದ 1:2**

ಕರ್ತನಾದ ಯೇಸುಕ್ರಿಸ್ತನಲ್ಲಿ ನನ್ನ ಪ್ರೀತಿಯುಳ್ಳ ಸಹೋದರ ಮತ್ತು ಸಹೋದರಿಯರೆ!



*Sis. Sajini Cherian*



*Bro. Willem Jacobus Pretorius*

ಕರ್ತನು, ದೇವರಾಗಿರುವ ಯೇಸುಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ. ನಾವು ನಂಬುತ್ತೇವೆ ನೀವೆಲ್ಲರೂ ಚೆನ್ನಾಗಿ ಇದ್ದೀರೆಂದು. ನಾವು ನಿರಂತರವಾಗಿ ನಿಮ್ಮ ಅಗತ್ಯತೆಗಳಿಗಾಗಿ ಪ್ರಾರ್ಥನೆ ಮಾಡುತ್ತಾ ಇದ್ದೇವೆ.

ಆತನ **ಕರೆಯ** ಸೇವೆಯ ಸೇವೆಗೆ ದೇವರ ಪರಲೋಕದಿಂದ ಅಗತ್ಯತೆಗಳನ್ನು ಪೂರೈಸಿದಕ್ಕಾಗಿ ನಾವು ದೇವರಿಗೆ ಧನ್ಯವಾದಗಳನ್ನು ಹೇಳುತ್ತೇವೆ. ನಮ್ಮ ಪ್ರೀತಿಯ ಸಹೋದರಿ ಸಜನಿ ಚೆರಿಯನ್ ಅವರನ್ನು ನಮ್ಮ ಅಂಗ್ಲಭಾಷೆಯ ಸಹಸಂಪಾದಕರಾಗಿ ಮತ್ತು ಸಹೋ, ವಿಲಿಯಂ ಜಾಕೋಬ್ ಪ್ರಿಟೋರಿಯಸ್ ನಮ್ಮ ಅಫ್ರಿಕಾನ್ಸ್ ಸಹ ಸಂಪಾದಕರಾಗಿ ನೀಡಿದಕ್ಕಾಗಿ ನಾವು ದೇವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ.ಇನ್ನೂ 14 ಸಹ ಸಂಪಾದಕರಿಗಾಗಿ ಮತ್ತು ಅವರೊಂದಿಗೆ ಆಯಾ ಸ್ಥಳಗಳಲ್ಲಿ ಕೆಲಸ ಮಾಡುವರರನ್ನು ದಯಮಾಡಿ ಜ್ಞಾಪಕ ಮಾಡಿಕೊಳ್ಳಿರಿ.

ಆತನ **ಕರೆಯ** ಎಲ್ಲಾ ಸೇವೆಗಳ ಚಟುವಟಿಕೆಗಳಿಗಾಗಿ ನಾವು ಒಳ್ಳೆಯ ಉತ್ತರವನ್ನು ಸ್ವೀಕರಿಸಿದ್ದೇವೆ. ಪ್ರಪಂಚದ್ಯಾಂತ ಕರ್ತನು ಅನೇಕ ಜನರ ಜೀವಿತವನ್ನು ಮುಟ್ಟಿದ್ದಾನೆ. ನಾವು ದೇವರಿಗೆ ತುಂಬಾ ಧನ್ಯವಾದಗಳನ್ನು ಹೇಳುತ್ತೇವೆ ಮತ್ತು ಆತನ ರಾಜ್ಯವನ್ನು ಕಟ್ಟುವದಕ್ಕೆ ನಮ್ಮನ್ನು ಉಪಯೋಗಿಸಿಕೊಂಡಿದ್ದಾನೆ. ನಾವು ಈಗಾಗಲೇ ಬರೆದಿದ್ದೇವೆ, ನಾವು ಇತ್ತೀಚಿನ ದಿನಗಳಲ್ಲಿ ಅನೇಕ ತರಹದ ಆತ್ಮೀಕ ಹೋರಾಟಗಳಿಂದ ಹಾದುಹೋಗುತ್ತಾ ಇದ್ದೇವೆ. ಆದ್ದರಿಂದ ನಮಗಾಗಿ ನೀವು ದಯಮಾಡಿ ಪ್ರಾರ್ಥಿಸಿರಿ.

ಆದರೆ ಪ್ರತಿಕೂಲವಾದ ಆಧ್ಯಾತ್ಮಿಕ ಪರಿಸ್ಥಿತಿಯ ಹೊರತಾಗಿಯೂ ನಾವು ಹಾದುಹೋಗುತ್ತಿದ್ದೇವೆ. ನಿಮ್ಮ ಒಳಿತಗಾಗಿ ನಾವು ಪ್ರಾರ್ಥನೆ ಮಾಡುವುದನ್ನು ನಾವು ನಿಲ್ಲಿಸಿಲ್ಲ. ದಿನದಿಂದ ದಿನಕ್ಕೆ ಈ ಲೋಕದ ಕ್ರಮವು ಬದಲಾವಣೆಯಾಗುತ್ತಾ ಇದೆ. ದೇವರ ಸೇವಕರುಗಳಾದ ನಮಗೆ ಪ್ರಪಂಚದ್ಯಾಂತಹ ದೇವರ ವಿಶೇಷವಾದ ಮುಟ್ಟವಿಕೆ ಮತ್ತು ಸರ್ವಶಕ್ತನಾದ ದೇವರಿಂದ ಸಂರಕ್ಷಣೆಬೇಕಾಗಿದೆ. ಇದರಿಂದ ನಾವು ನಮ್ಮ ಮೇಲಿನ ಅಭಿಷೇಕವನ್ನು ಈ ಪ್ರಪಂಚದ ಜನರಿಗೆ ಪ್ರತಿಯಾಗಿ ನೀಡಬಹುದು. ನಾವು ಆಧ್ಯಾತ್ಮಿಕ ಯುದ್ಧದ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದೇವೆ ಎಂದು ಹೇಳಬಹುದು. ನಮ್ಮ ದೇವರಾದ ಯೇಸುಕ್ರಿಸ್ತನು ನಮ್ಮ ನಾಯಕನು ಮತ್ತು ಸಂರಕ್ಷಣೆಮಾಡುವವನಾಗಿದ್ದಾನೆ. ಅಮೇನ್.

ದೇವರು ನಿಮ್ಮನ್ನು ಹೆಚ್ಚಹೆಚ್ಚಾಗಿ ಆಶೀರ್ವದಿಸಲಿ!

**ಕ್ರಿಸ್ತ ಯೇಸುವಿವಲ್ಲಿ ನಿಮ್ಮ ಸೇವಕರುಗಳು,**

**ಪಾ. ಎಸ್ ಸ್ಯಾಮ್ ಸೆಲ್ವರಾಜ್ ಮತ್ತು ಅಲೆಕ್ಷಿ ಸ್ಯಾಮಸನ್ ಸ್ಯಾಮ್**
(+91) 98412 71858 / 98410 71858, E.mail : sam@echoofhiscall.org

**Our Ministries:** ECHO OF HIS CALL Monthly Magazines (16 languages) ✿ BIBLECOR - Postal Courses (3 languages) ✿ Media Ministry ✿ Online Courses ✿ Theological Correspondence Courses (2 languages) ✿ Church Planting ✿ Nehemiah Bible Colleges ✿ Gospel Printing Press ✿ Great Commission Partners ✿ St. Paul's Matriculation School ✿ Crusades ✿ Community Development

*(1ನೇ ಪುಟದಿಂದ)*

ಮಾರ್ಗದರ್ಶನಕ್ಕೆ ಅನುಗುಣವಾಗಿ ತಿರುಗುವಾಗ. ಗೂಗಲ್ ತೋರಿಸಿದಂತಹ ದಾರಿಯು ಬಹಳ ಇಕ್ಕಟ್ಟಾಗಿದೆ ಎಂದು ನಾನು ಗಮನಿಸಿದಾಗ, ಅಂತಹ ಕಿರಿದಾದ ರಸ್ತೆಯ ಮೂಲಕ ನಾನು ಓಡಿಸಲು ಸಾಧ್ಯವಾಗುತ್ತದೆಯೋ ಎಂದು ನನಗೆ ಖಚಿತವಾಗಿರಲಿಲ್ಲ. ನನ್ನ ಗೊಂದಲವನ್ನು ನಿವಾರಿಸಲು, ನನ್ನ ಮುಂದಿರುವ ಬೈಕ್ ಸವಾರನನ್ನು ದಿಕ್ಕುಗಳಿಗಾಗಿ ಕೇಳಲು ನಾನು ನಿರ್ಧರಿಸಿದೆ. ನನ್ನ ಸಮಾಧಾನಕ್ಕಾಗಿ, ಅವರು ನಾನು ಹೋಗುತ್ತಿರುವ ಗಮ್ಯಸ್ಥಾನದಲ್ಲಿ ವಾಸಿಸುತ್ತಿದ್ದಾರೆ ಮತ್ತು ದಾರಿ ತೋರಿಸಲು ಅವರು ಮುಂದಾದರು. ಅದು ಎಂತಹ ಸಮಾಧಾನವಲ್ಲವೇ! ಉತ್ತಮ ಭಾಗವೆಂದರೆ ನಾನು ಬೈಕ್ ಸವಾರನನ್ನು ಅನುಸರಿಸುತ್ತಿದ್ದರೂ ಸಹ, ನನ್ನ ನ್ಯಾವಿಗೇಷನ್ ಸಿಸ್ಟಮ್ ಬೇರೆ ಮಾರ್ಗಕ್ಕೆ ಸೂಚನೆಗಳನ್ನು ನೀಡುವುದನ್ನು ಮುಂದುವರಿಸಿದೆ. ಏನೇ ಹಾಗಲಿ, ನನ್ನ ನ್ಯಾವಿಗೇಷನ್ ಸಿಸ್ಟಮ್‌ನ್ನು ನಾನು ಸಂಪೂರ್ಣವಾಗಿ ತಿರಸ್ಕರಿಸಿಲು ನಿರ್ಧರಿಸಿ ಯಾಕೆಂದರೆ ನಾನು ಅನುಸರಿಸುವ ವ್ಯಕ್ತಿಯ ಮೇಲೆ ಭರವಸೆವುಳ್ಳವಾಗಿದ್ದೇನು. ಆತನಿಗೆ ಮಾರ್ಗವು ಬಹಳ ಚೆನ್ನಾಗಿ ಗೊತ್ತಿತ್ತು ಮತ್ತು ಮುಂಚೆ ಆತನು ಆ ದಾರಿಯಲ್ಲಿ ಹೋಗಿದ್ದನು. ಮಾರ್ಗದರ್ಶನಕ್ಕಾಗಿ ಯಾರನ್ನಾದರೂ ಅವಲಂಬಿಸುವುದು ತುಂಬಾ ಸಮಾಧಾನಕರವಾಗಿತ್ತು.

ನಿಮ್ಮ ಜೀವನವನ್ನು ನ್ಯಾವಿಗೇಟ್ ಮಾಡಲು ನೀವು ಅಂತಹ ವ್ಯಕ್ತಿಯನ್ನು ಹೊಂದಬೇಕೆಂದು ನೀವು ಎಂದಾದರೂ ಬಯಸಿದ್ದೀರಾ? ನಿಮ್ಮ ಪರವಾಗಿ ಕಠಿಣ ಮತ್ತು ಸಂಕೀರ್ಣ ನಿರ್ಧಾರಗಳನ್ನು ತೆಗೆದುಕೊಳ್ಳುವ ಯಾರಾದರೂ ಮತ್ತು ನೀವು ಮಾಡಬೇಕಾಗಿರುವದು ಅನುಸರಿಸಬೇಕೇ? ನೀವು ನಂಬಿದರ ನಂಬಿ ಅಥವಾ ಬಿಡಿರಿ, ನಮಗೆ ಯಾರಾದರೂ ಈ ತರಹ ಇದ್ದಾರೆ, ಆತನ ಹೆಸರು ಯೇಸುಕ್ರಿಸ್ತನು, ಆತನಿಗೆ ನಮ್ಮ ಭೂತ, ವರ್ತಮಾನ, ಭವಿಷ್ಯತ್ ಗೊತ್ತಿದ್ದೆ. ಈಗಾಗಲೇ ಆತನು ನಾಳೆಗೆ ನಮಗೆ ಇದ್ದಾನೆ. ನಮಗೆ ಬರುವದಕ್ಕೆ ಮುಂಚಿತವಾಗಿ ಆತನಿಗೆ ಎಲ್ಲವೂ ಗೊತ್ತಿದೆ. **ಈ ಕಾರಣಕ್ಕಾಗಿ ನಮ್ಮನ್ನು ಜಗತ್ಸೃಷ್ಟಿಗೆ ಮುಂಚಿತವಾಗಿ ನಮ್ಮನ್ನು ಆರಿಸಿಕೊಂಡಿದ್ದಾನೆ** (ಎಫೆಸ 1:4). ನಮ್ಮೆಲ್ಲರಿಗಾಗಿ ಆತನಲ್ಲಿ ಸುಂದರವಾದ ಯೋಜನೆವಿದೆ. ಯೆರಮೀಯ 29:11ರಲ್ಲಿ ಪ್ರಕಟಿಸಿದ ಹಾಗೆ, **ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ.**

ಏನೇ ಆಗಲಿ, ನಮ್ಮ ಜೀವನವು ನಿಸ್ಸಂದೇಹವಾಗಿ ಸರ್ವಶಕ್ತನು ನಿಗದಿಪಡಿಸಿದ ಯೋಜನೆಯನ್ನು ಅನುಸರಿಸುತ್ತದೆ. ಇದು ಒಳ್ಳೆಯದನ್ನು ಒಳಗೊಳ್ಳುತ್ತದೆ. ಸವಾಲಿನ, ಮತ್ತು ಜೀವನದ ಪ್ರತಿಕೂಲವಾದ ಅಂಶಗಳು.

## 1. ಒಳ್ಳೆಯ ಹೋರಾಟವನ್ನು ಮಾಡಿರಿ : ಯೋಧನಾಗು, ಚಿಂತಕನಾಗಬೇಡ!

ಇಂದು ನಾವು ಸವಾಲಿನ, ಎದುರಿಸುವ ಮತ್ತು ಗೊಂದಲಮಯವಾಗಿ ಗ್ರಹಿಸುವ ಸಂದರ್ಭಗಳನ್ನು ಸಹ ಅಂತಿಮವಾಗಿ ನಮ್ಮ ಪ್ರಯೋಜನಕ್ಕಾಗಿ ಕೆಲಸ ಮಾಡುತ್ತವೆ ಎಂದು ಗುರುತಿಸುವುದು ನಿರ್ಣಾಯಕ ವಾಗಿದೆ. ದೇವರು ನಮ್ಮೆಲ್ಲರನ್ನು ಯೋಧನರನ್ನಾಗಿ ಕರೆದಿದ್ದಾನೆ ಹೊರತು ಚಿಂತಕರಾಗಿ ಅಲ್ಲ.

ಅಗ್ಗಾಗ್ಗೆ, ಜೀವನದ ಪ್ರಯೋಗಗಳು ನಮ್ಮನ್ನು ಹತಾಶೆಗೆ ಕೊಂಡೊಯ್ಯಬಹುದು ಮತ್ತು ನಮ್ಮ ಜೀವನದ ಉದ್ದೇಶವನ್ನು ಕಳೆದುಕೊಳ್ಳಬಹುದು. ಏನೇಹಾಗಲಿ, ಯೇಸುಕ್ರಿಸ್ತನು ಈ ಲೋಕಕ್ಕೆ ಶಿಲುಬೆಯಲ್ಲಿ ಸತ್ತು, ಪುನರುತ್ಥಾನ ಹೊಂದಿ, ನಿತ್ಯ ಜೀವವಿದೆ ಎಂದು ಪ್ರಕಟಿಸಿದ್ದನ್ನು ಎಂದಿಗೂ ನಾವು ಮರೆಯಬಾರದು. ನಮ್ಮ ವರ್ತಮಾನ ಜೀವನವು ಕ್ಷಣಿಕ, ಮುಂಬರುವ ಶಾಶ್ವತ ಜೀವನಕ್ಕೆ ತರಬೇತಿ ಮೈದಾನವಾಗಿ ಕಾರ್ಯ ನಿರ್ವಹಿಸುತ್ತದೆ. ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ (2 ಕೊರಿಂಥ 3:18). 1 ತಿಮೊಥಿ 6:12 ಪೌಲನು ಹೇಳಿದ ಪ್ರಕಾರ, ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯ ಜೀವವನ್ನು ಹಿಡಿದುಕೋ. ಅದ್ದರಿಂದ, ನಾವೆಲ್ಲರೂ ಶ್ರೇಷ್ಠ ಹೋರಾಟವನ್ನು ಮಾಡುವದಕ್ಕಾಗಿ ಕರೆಯಲ್ಪಟ್ಟಿದ್ದೇವೆ.

ಪೌಲನ ಇನ್ನೊಂದು ಮಾತಿನಲ್ಲಿ ನಂಬಿಕೆ ಯೆಂಬ ಶ್ರೇಷ್ಠ ಹೋರಾಟವನ್ನು ಮಾಡಬೇಕು.



***God trains my fingers for battle***

ನೀವು ಅನೇಕ ಸಾಕ್ಷಿಗಳ ಸಮ್ಮುಖದಲ್ಲಿ ನಿಮ್ಮ ಒಳ್ಳೆಯ ಅರಿಕೆಯನ್ನು ಮಾಡಿದಾಗ ನೀವು ಕರೆಯಲ್ಪಟ್ಟ ನಿತ್ಯಜೀವವನ್ನು ಹಿಡಿದುಕೊಳ್ಳಿ.

ನಾವು ಈ ಉದಾತ್ತ ಹೋರಾಟವನ್ನು ಹೇಗೆ ನಡೆಸಬಹುದು? ಇದು ನಂಬಿಕೆಯ ಮೂಲಕ ಮಾತ್ರ. ನಂಬಿಕೆಯಿಲ್ಲದೆ, ಈ ನೀತಿಯ ಹೋರಾಟವನ್ನು ಮಾಡುವದಕ್ಕೆ ಅಸಾಧ್ಯವಾಗಿದೆ. ನಿತ್ಯಜೀವವನ್ನು ನಾವು ಸುರಕ್ಷಿತವಾಗಿ ಇರಿಸುವದಕ್ಕೆ ಆಗುವುದಿಲ್ಲ. ನಮ್ಮ ಅಸ್ತಿತ್ವದ ಉದ್ದೇಶವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂದು ಇದು ಸೂಚಿಸುತ್ತದೆ. ಕೀರ್ತನೆ 144:1 ಬಹಳ ಸುಂದರವಾಗಿ ಉಲ್ಲೇಖಿಸುತ್ತದೆ. **ನನ್ನ ಶರಣನಾದ ಯೆಹೋವನಿಗೆ ಕೊಂಡಾಟವಾಗಲಿ. ಅತನು ನನ್ನ ಕೈಗಳಿಗೆ ಯುದ್ಧವಿದ್ಯೆಯನ್ನೂ ನನ್ನ ಬೆರಳುಗಳಿಗೆ ಕಾಳಗವನ್ನೂ ಕಲಿಸಿದ್ದಾನೆ.** ದೇವರು ನಮ್ಮ ತರಬೇತಿದಾರನು ಮತ್ತು ಸ್ವರ್ಗೀಯ ಸೈನ್ಯದ ಕಮಾಂಡರ್ ಆಗಿದ್ದಾನೆ. ಹೋರಾಟವನ್ನು ಮಾಡುವದಕ್ಕೆ ಸಿದ್ಧಗೊಳಿಸುತ್ತಾನೆ. ಆತನು ಸೇನಾಧಿಶ್ವರನಾದ ಕರ್ತನು ಆಗಿದ್ದಾನೆ. ಜೀವನದ ಸವಾಲುಗಳನ್ನು ಎದುರಿಸುವದಕ್ಕೆ ಶಕ್ತಗೊಳಿಸುತ್ತಾನೆ. ವಿಮೋಚನಕಾಂಡ 15:3 ಪ್ರಕಟಿಸುತ್ತದೆ. **ಯೆಹೋವನು ಯುದ್ಧಶೂರನು; ಆತನ ನಾಮಧೇಯವು ಯೆಹೋವನೇ.** ಆತನ ಹಾಗೆ ನಾವು ಕೂಡ ಯೋಧರಾಗಬೇಕೆಂದು ಚಿಂತಕರಾಗ ಬಾರದೆಂದು ದೇವರು ಬಯಸುತ್ತಾನೆ. ಖಚಿತ ವಾಗಿರಿ, ಎಲ್ಲಾ ಗೊತ್ತಿರುವ ಕಮಾಂಡರ್‌ನ ಮಾರ್ಗದರ್ಶನದಲ್ಲಿ ನಾವು ಇರಬೇಕು. ಅದ್ದರಿಂದ, ಬಿಟ್ಟುಕೊಡಬೇಡಿರಿ! ಜ್ಞಾಪಕ ಮಾಡಿಕೊಳ್ಳಿರಿ ನಾವು ಹೋರಾಟ ಮಾಡುತ್ತಾ ಇದ್ದೇವೆ. ನಮ್ಮ ಕಮಾಂಡರ್ ಕರ್ತನು ಕಲ್ವಾರಿ ಶಿಲುಬೆಯಲ್ಲಿ ಈಗಾಗಲೇ ಗೆದ್ದಿದ್ದಾನೆ.

## 2. ಹೋರಾಟ ಮಾಡುವದಕ್ಕೆ ಆಯುಧಗಳು !

ಹೋರಾಟ ಮಾಡುವದಕ್ಕೆ ದೇವರು ನಮಗೆ ಶಕ್ತಿಯುಳ್ಳ ಸರ್ವಾಯುಧಗಳನ್ನು ಕೊಟ್ಟಿದ್ದಾನೆ. 2 ಕೊರಿಂಥ 10:4 ಈ ಸರ್ವಾಯುಧಗಳ ಬಗ್ಗೆ ನಾವು ಓದುತ್ತೇವೆ. **ನಾವು ಉಪಯೋಗಿಸುವ ಆಯುಧಗಳು ಲೋಕ ಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ.** ಈ ಆಯುಧಗಳು ಬಹಳ ಶಕ್ತಿಯುಳ್ಳ ಆಯುಧಗಳಾಗಿ ಬಲವಾದ ಕೋಟೆಗಳನ್ನು ನಾಶಮಾಡುತ್ತೇವೆ. ಅದು ಪಾಪವಾಗಿರಬಹುದು, ಬಂಧನ, ನಮ್ಮನ್ನು

ಸೋಲುಗಳನ್ನಾಗಿ ಮಾಡುವ ಸಂತತಿಯ ಶಾಪಗಳು. ಪದೇಪದೇ ಕ್ರಮದ ಅನಾರೋಗ್ಯಗಳನ್ನು ನಾವು ನೋಡುವಾಗ, ಅಥವಾ ನಿಮ್ಮ ಕುಟುಂಬಗಳಲ್ಲಿ ಕುಗ್ಗಿದ ಸಂಗತಿಗಳು. ಈ ಅಯುಧಗಳನ್ನು ಉಪಯೋಗಿಸುವ ಸಮಯವು ಬಂದಿದೆ. ಕಲ್ವಾರಿಯ ಶಿಲುಬೆಯಲ್ಲಿ ಸುರಿದ ನಮ್ಮ ರಕ್ಷಕನಾದ ಯೇಸುಕ್ರಿಸ್ತನ ರಕ್ತದಲ್ಲಿ ಜಯವನ್ನು ಹೇಳಿಕೊಳ್ಳಬೇಕಾಗಿದೆ. ಈ ಆಯುಧಗಳನ್ನು ಉಪಯೋಗಿಸುವದಕ್ಕೆ ಪ್ರಾರಂಭಿಸೋಣ. ದೇವರು, ನಮ್ಮ ಜೀವಿತದಲ್ಲಿ ಎದುರಿಗೆ ಬರುವ ಹೋರಾಟಗಳನ್ನು ಆತನು ಮಾಡುತ್ತಾನೆ.

## ಎಲ್ಲಾ ಹೋರಾಟಗಳನ್ನು ಹೋರಾಡ ಬೇಕಾಗಿಲ್ಲ!

ಅದಾಗ್ಯೂ, ಎಲ್ಲಾ ಹೋರಾಟಗಳನ್ನು ಹೋರಾಡುವ ಅಗತ್ಯವಿಲ್ಲ ಎಂದು ನಾವು ಅರಿತುಕೊಳ್ಳಬೇಕು. ಕೆಲವು ಹೋರಾಟಗಳು ಅಥವಾ ಮುಖ್ಯವಾದದ್ದರಿಂದ ನಮ್ಮನ್ನು ಗಲಿಬಲಿಗೊಳಿಸುವದಕ್ಕೆ ಸವಾಲುಗಳು ಬರುತ್ತೇವೆ. ನಾವು ನಮ್ಮ ಹೋರಾಟಗಳನ್ನು ಜ್ಞಾನದಿಂದ ಆರಿಸಿಕೊಳ್ಳುವದನ್ನು ಕಲಿತುಕೊಳ್ಳಬೇಕು. ನಿಮ್ಮ ಶಕ್ತಿ, ಸಮಯ, ಸಾಮರ್ಥ್ಯವನ್ನು ಬೇಡವಾದ ಹೋರಾಟಗಳಿಗೆ ವ್ಯರ್ಥ ಮಾಡಿಕೊಳ್ಳಬೇಡಿರಿ. ನಮಗೆ ವಿರೋಧವಾಗಿ ಬರುವ ಎಲ್ಲಾ ಹೋರಾಟಗಳಿಗೆ ವ್ಯಸ್ತವಾದರೆ ನಮ್ಮ ಜೀವಿತದಲ್ಲಿ ಆಯಾಸಗೊಳ್ಳುತ್ತೇವೆ. ದೇವರು ನಮ್ಮನ್ನು ಹೋರಾಡಲು ಕರೆದ ನಿಜವಾದ ಹೋರಾಟವನ್ನು ನಾವು ಕಳೆದುಕೊಳ್ಳುತ್ತೇವೆ.

## ಹೆಚ್ಚಿನ ಕರೆಯುವಿಕೆ, ಹೆಚ್ಚಿನ ಸವಾಲುಗಳು!

ದೊಡ್ಡ ಆಜ್ಞೆಗಾಗಿ ದೇವರು ನಿಮ್ಮನ್ನು ಕರೆಯುವಾಗ, ಅದನ್ನು ನೇರವೇರಿಸುವುದನ್ನು ನಿಲ್ಲಿಸುವದಕ್ಕೆ ಆನೇಕ ಸವಾಲುಗಳು ಬರುತ್ತೇವೆ. ಏನೇ ಹಾಗಲಿ, ನಾವು ಬಹಳವಾಗಿ ಸವಾಲುಗಳ ಮೇಲೆ ಕೇಂದ್ರಿಕರಿಸಿದರೆ ಅದರ ಹಿಂದೆ ಇರುವ ಆಶೀರ್ವಾದಗಳನ್ನು ನಾವು ಕಳೆದುಕೊಳ್ಳುತ್ತೇವೆ.

1 ಸಮುವೇಲದಲ್ಲಿ ದಾವಿದ ಮತ್ತು ಗೊಲಾತ್ಯನ ಕಥೆಯಲ್ಲಿ ಬಹಳ ಸುಂದರವಾಗಿ ವಿವರಿಸಲಾಗಿದೆ. ನಮ್ಮೆಲ್ಲರಿಗೆ ಗೊತ್ತಿರುವ ಕಥೆಯಾಗಿದೆ.

ಗೊಲಾತ್ಯನು ಇಸ್ರಾಯೇಲ್ಯರ ಸೈನ್ಯಕ್ಕೆ ಒಬ್ಬರು ಒಬ್ಬರು ಆಗಿ ಬರುವದಕ್ಕೆ ಸವಾಲು ಹಾಕುವದನ್ನು ನಾವು ನೋಡುತ್ತೇವೆ. ಅವನು 40 ದಿನಗಳು ಪಟ್ಟುಬಿಡದೆ ಕೂಗಾಡುತ್ತಾ ಹಾಗು ಶಾಪ ಹಾಕುವದಕ್ಕೆ ತೊಡಗಿದನು. ಇಸ್ರಾಯೇಲ್ಯರಲ್ಲಿ ದೊಡ್ಡ ಭಯಕ್ಕೆ ಕಾರಣವಾಯಿತು. **ಇಸ್ರಾಯೇಲ್ಯರು ಅವನನ್ನು ನೋಡಿ ಬಹಳವಾಗಿ ಭಯಪಟ್ಟು ಅಲ್ಲಿಂದ ಓಡಿಹೋದರು** (1 ಸಮುವೇಲ 17:24).

ಏನೇ ಹಾಗಲಿ, ನಾವು ಈಗ ದಾವಿದನ ಉತ್ತರವನ್ನು ಪರಿಕ್ಷಿಸೋಣ 1 ಸಮುವೇಲ 17:26 **ಜೀವ ಸ್ವರೂಪನಾದ ದೇವರ ಸೈನ್ಯವನ್ನು ಹೀಯಾಳಿಸುವದಕ್ಕೆ ಸುನ್ನತಿಯಿಲ್ಲದ ಈ ಫಿಲಿಷ್ಟಿಯನು ಎಷ್ಟರವನು?** ಫಿಲಿಷ್ಟಯನ ಮಾತುಗಳಿಗೆ ತಾಳಿಕೊಳ್ಳುವದಕ್ಕೆ ದಾವಿದನಿಗೆ ಆಗಲಿಲ್ಲ. ನಾವು ಇದನ್ನು ಸೂಕ್ಷ್ಮವಾಗಿ ಆತನ ಉತ್ತರವನ್ನು ವಿಶ್ಲೇಷಿಸುವಾಗ, ನಾವು ದಾವಿದನ ಯುದ್ಧ ತಂತ್ರವನ್ನು ಗಮನಿಸಬಹುದು. ತನ್ನ ಸಮಸ್ಯೆಯನ್ನು ಅವನು ದೇವರೊಂದಿಗೆ ಜೋಡಣೆ ಮಾಡುತ್ತಾನೆ. ತನ್ನ ವಿರುದ್ಧ ಮಾತನಾಡಲು ಯಾರಿಗೂ ಅವಕಾಶ ನೀಡುವುದಿಲ್ಲ. ದಾವಿದನ ದೃಷ್ಟಿಯಲ್ಲಿ, ಯುದ್ಧವು ಆತನದಲ್ಲ,ಆದರೆ ದೇವರದ್ದು.

ಆಗಾಗ್ಗೆ, ನಾವು ನಮ್ಮ ಹೋರಾಟಗಳನ್ನು ನಮ್ಮ ಕೈಯಲ್ಲಿ ತೆಗೆದುಕೊಂಡು ಹೋರಾಡಲು ಪ್ರಯತ್ನಿಸುತ್ತೇವೆ. ಪ್ರಿಯ ಸ್ನೇಹಿತರೇ, ನಿಮ್ಮ ಹೋರಾಟಗಳನ್ನು ಕರ್ತನ ಮುಂದೆ ಒಪ್ಪಿಸಿಕೊಡಿರಿ. ಆತನು ದೊಡ್ಡ ಯೋಧ ನಾಗಿದ್ದಾನೆ. ನಿಮ್ಮ ಪರವಾಗಿ ಆತನು ಯುದ್ಧ ಮಾಡುವನು. ದುರದೃಷ್ಟವಶಾತ್, ಎಲ್ಲವನ್ನೂ ಸ್ವತಂತ್ರವಾಗಿ ನಿರ್ವಹಿಸುವ ಮೂಲಕ ನಾವು ಆಗಾಗ್ಗೆ ದಣಿದಿದ್ದೇವೆ. ಇದು ಆಯಾಸಕ್ಕೆ ಕಾರಣವಾಗಬಹುದು ಮತ್ತು ಕೆಲವೊಮ್ಮೆ ನಮ್ಮ ನಂಬಿಕೆಯಿಂದ ದೂರ ಹೋಗಬಹುದು.

## 3. ಎಲ್ಲಾ ವಿಷಯಗಳು ಒಳ್ಳೆಯದಕ್ಕಾಗಿ ಕೆಲಸ ಮಾಡುತ್ತೇವೆ!

ಪ್ರೀತಿಯ ಸಹೋದರಿ ಮತ್ತು ಸಹೋದರಿಯರೇ, ಯುದ್ಧ ರಣರಂಗಕ್ಕೆ ದಾವಿದನನ್ನು ಕರೆತರುವದಕ್ಕೆ ದೇವರು ವಿಶೇಷವಾದ ಯೋಜನೆಯನ್ನು ಇಟ್ಟಿದ್ದನು. ದಾವಿದನು ಪ್ರಾರಂಭದಲ್ಲಿ ತಾನು ಕೇವಲ ತನ್ನ ಸಹೋದರರಿಗೆ ಆಹಾರವನ್ನು ತಲುಪಿಸುತ್ತಿದ್ದೇನೆ ಎಂದು ನಂಬಿದ್ದನು. ದೇವರು ದೈವತ್ವದ ಯೋಜನೆಯನ್ನು ಹೊಂದಿದ್ದನು. ದಾವಿದನನ್ನು ಇಸ್ರಾಯೇಲ್ಯನ ಅರಸನನ್ನಾಗಿ ಮಾಡುವದಕ್ಕೆ ಇದು ಮೊದಲ ಹೆಜ್ಜೆಯಾಗಿತ್ತು. ದಾವಿದನಿಗೆ ಆ ಸಮಯದಲ್ಲಿ ಯಾವುದೇ ಸುಳಿವು ಇರಲಿಲ್ಲ. ದೇವರು ಅದ್ವೀತವಾದ ಯೋಜನೆಯನ್ನು ಹೊಂದಿದ್ದನು ಮತ್ತು ಆತನಿಗಾಗಿ ಆಶೀರ್ವಾದದ ಅಂಗಡಿ ಆತನಿಗಾಗಿ ಇತ್ತು.



*David fought with Goliath*

(6ನೇ ಪುಟಕ್ಕೆ)

RESIDENTIAL BIBLE COURSE
NEHEMIAH BIBLE COLLEGE, Chennai.
Medium : Hindi
Registered Candidate for Membership
Asia Theological Association (ATA)
Recognised by International Christian Leaders & Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for admission!
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
✶ ONLINE CLASSES ARE AVAILABLE ✶

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13 )
ತ್ವರಿತಗೊಳಿಸುವುದು ( II ತಿಮೋಥಿ. 1:6 )

**19 ನವೆಂಬರ್ 2023 ರಿಂದ 18 DECEMBER 2023 ರ ವರೆಗೆ**

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಸ್ತೋತ್ರಕ್ಕಾಗಿ ಅಂಶಗಳು

| | | |
|---|---|---|
| ನವೆಂಬರ್ 19 | : | ನಮ್ಮ **ನೆಹಮೀಯ ಸತ್ಯವೇದ ಕಾಲೇಜಿನ** 2023-24ರ ಮೊದಲ ಸೆಮಿಸ್ಟರ್‌ನ್ನು ಸಫಲವಾಗಿ ಮುಗಿಸಿದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. |
| ನವೆಂಬರ್ 20 | : | ನಮ್ಮ ಮುದ್ರಣಾಲಯದಲ್ಲಿ ನಮ್ಮ ಪತ್ರಿಕೆಯನ್ನು 16 ಭಾಷೆಗಳಲ್ಲಿ ಮುದ್ರಿಸಲು ಮತ್ತು ಪ್ರಕಟಿಸಲು ಮತ್ತು ಅವುಗಳನ್ನು ಸೇವಾಕ್ಷೇತ್ರಗಳಿಗೆ ಕಳುಹಿಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ. |
| ನವೆಂಬರ್ 21 | : | ಆಸ್ಪತ್ರೆಯ ಸೇವೆಯಲ್ಲಿ ದೇವರ ಅದ್ಭುತಕಾರ್ಯಗಳಿಗಾಗಿ ಆತನಿಗೆ ಸ್ತೋತ್ರವಾಗಲಿ. |
| ನವೆಂಬರ್ 22 | : | ನಮ್ಮ ಭಾನುವಾರದ ಆರಾಧನೆಗಳು, ಮುಖ್ಯಸಭೆಯಲ್ಲಿ ಮತ್ತು ಶಾಖ ಸಭೆಗಳಲ್ಲಿ ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯನ್ನು ತಲುಪಿಸಿದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. |
| ನವೆಂಬರ್ 23 | : | ಬಹುವಿಧದ ಸೇವೆಗಳ ಮೂಲಕವಾಗಿ ಸುವಾರ್ತೆಯನ್ನು ಸಾರುವ ಸಮರ್ಪಣೆಯನ್ನು ಹೊಂದಿರುವ ನಮ್ಮ ಹಿರಿಯ ಸಭಾಪಾಲಕರಿಗಾಗಿ. |
| ನವೆಂಬರ್ 24 | : | ಆತನ **ಕರೆಯ ಸೇವೆಯ ಪತ್ರಿಕಾ** ಸೇವೆಯ ಎಲ್ಲಾ ಸಮರ್ಪಣೆಯ ಸಹಸಂಪಾದಕರಿಗಾಗಿ ದೇವರಿಗೆ ಸ್ತೋತ್ರವಾಗಲಿ. |
| ನವೆಂಬರ್ 25 | : | ನಮ್ಮ ಪ್ರಾರ್ಥನ ಪಾಲುಗಾರರು, ಚಂದಾದರ ಪಾಲುಗಾರರ, ನಂಬಿಕೆಯ ಪಾಲುಗಾರರು, ಜೀವಂತ ಪಾಲುಗಾರರು ಮತ್ತು ದೊಡ್ಡ ಆಜ್ಞೆಯ ಪಾಲುಗಾರರು ಅವರ ಕುಟುಂಬಗಳಲ್ಲಿ ಮೇಲೆ ದೇವರ ಕರುಣೆಗಾಗಿ ಆತನಿಗೆ ಸ್ತೋತ್ರವಾಗಲಿ. |
| ನವೆಂಬರ್ 26 | : | ನಮ್ಮ ಸಾಮನ್ಯ ಸಹಾಯಕರು ಮತ್ತು ನಮ್ಮ ಸೇವೆಯಲ್ಲಿ ಅವರ ಒಳಗೊಳ್ಳುವಿಕೆ. |
| ನವೆಂಬರ್ 27 | : | ನಮ್ಮ ಕಛೇರಿ ಮತ್ತು ಮುದ್ರಣಾಲಯದ ಸಿಬ್ಬಂದಿ ವರ್ಗದವರು ಆತನ **ಕರೆಯ ಸೇವೆಯಲ್ಲಿ** ಅವರ ಸಮರ್ಪಣೆಗಾಗಿ. |
| ನವೆಂಬರ್ 28 | : | ಹೊಸ ಅಂಗ್ಲ ಭಾಷೆಯ ಸಹಸಂಪಾದಕರಾದ ಸಿ, ಸಜನಿ ಚೆರಿಯನ್ ಮತ್ತು ಅಪ್ರಿಕನ್ ಸಹಸಂಪಾದಕರಾದ ವಿಲಿಯಂದ ಜೇಕಬ್ ಪಿ. ನಮಗೆ ಕೊಟ್ಟಿದ್ದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. |
| ನವೆಂಬರ್ 29 | : | ನಮ್ಮ ಆತನ ಕರೆಯ ಸೇವೆಯ ಯೂಟ್ಯುಬ್ ಸೇವೆಯ ಮಿಡಿಯಾ ಸೇವೆಯ ಮೂಲಕ ಸುವಾರ್ತೆಯನ್ನು ಪ್ರಸಾರಿಸುವಂತೆ. |
| ನವೆಂಬರ್ 30 | : | ನಮ್ಮ ಮುಖ್ಯ ಸಭೆ ಮತ್ತು ಶಾಖ ಸಭೆಗಳಲ್ಲಿ ಹೆಚ್ಚು ಭಾನುವಾರ ಶಾಲೆಯ ಮಕ್ಕಳನ್ನು ಕೊಟ್ಟಿದ್ದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. |
| ಡಿಸೆಂಬರ್ 01 | : | ನಮ್ಮ **ಸಂತ ಪೌಲ ಮೆಟ್ರಿಕೇಲುಷ್ಯನ್ ಶಾಲೆ** ಮತ್ತು **ನೆಹಮೀಯ ಸತ್ಯವೇದ ಕಾಲೇಜಿನ** ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ದೈವತ್ವದ ಸಂರಕ್ಷಣೆಗಾಗಿ ದೇವರಿಗೆ ಸ್ತೋತ್ರವಾಗಲಿ. |
| ಡಿಸೆಂಬರ್ 02 | : | ಹೆಚ್ಚಿನ ವಿದ್ಯಾರ್ಥಿಗಳು ಮತ್ತು ಹೆಚ್ಚಿನ ಉತ್ಸಾಹದೊಂದಿಗೆ ವಸತಿ ಮತ್ತು ಸಂಜೆ **ನೆಹೆಮೀಯ ಸತ್ಯವೇದ ಕಾಲೇಜಿನ** ಎರಡನೇ ಸೆಮಿಸ್ಟರ್ ಅನ್ನು ಪ್ರಾರಂಭಿಸಲು ನಮಗೆ ಆಶೀರ್ವಾದವನ್ನು ಕೊಟ್ಟಿದ್ದಕ್ಕಾಗಿ. |
| ಡಿಸೆಂಬರ್ 03 | : | ಅತನ **ಕರೆಯ ಪ್ರತಿಧ್ವನಿಯ** ಸೇವೆಗಳ ಎಲ್ಲಾ ಚಟುವಟಿಕೆಗಳ ಮೇಲೆ ಆತನ ಹಸ್ತವು ಇದ್ದಕ್ಕಾಗಿ ಆತನಿಗೆ ಸ್ತೋತ್ರವಾಗಲಿ. |

## ಪ್ರಾರ್ಥನೆಗಾಗಿ ಅಂಶಗಳು

| | | |
|---|---|---|
| ಡಿಸೆಂಬರ್ 04 | : | ನಮ್ಮ ಹಿರಿಯ ಸಭಾಪಾಲಕರಾದ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಎಲ್ಲಾ ದುಷ್ಟಶಕ್ತಿಗಳಿಂದ ಸಂರಕ್ಷಣೆ ಮಾಡುವಂತೆ. |
| ಡಿಸೆಂಬರ್ 05 | : | ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯನ್ನು ಸಫಲವಾಗಿ ಮುಗಿಸುವಂತೆ. |
| ಡಿಸೆಂಬರ್ 06 | : | ಪ್ರಪಂಚದ್ಯಾಂತಹ ಇರುವ ಮಿಶನರಿಗಳಿಗಾಗಿ ಹಾಗು ಸಭಾಪಾಲಕರುಗಳು ಸಂರಕ್ಷಣೆಗಾಗಿ. |
| ಡಿಸೆಂಬರ್ 07 | : | ನಮ್ಮ **ನೆಹಮೀಯ ಸತ್ಯವೇದ ಕಾಲೇಜಿನ** ಅಟಾ ಮಾನ್ಯತೆ ಯನ್ನು ಪಡೆಯುವಂತೆ. |
| ಡಿಸೆಂಬರ್ 08 | : | ನಮ್ಮ **ಸಂತ ಪೌಲ ಮೇಟ್ರಿಕೇಲ್ಯುಷನ್** ಮತ್ತು **ನೆಹಮೀಯ ಸತ್ಯವೇದ ಕಾಲೇಜಿನ** ಸಿಬ್ಬಂದಿ ವರ್ಗದವರಿಗಾಗಿ ಮತ್ತು ವಿದ್ಯಾರ್ಥಿಗಳಿಗಾಗಿ. |
| ಡಿಸೆಂಬರ್ 09 | : | ಪ್ರಪಂಚದ ಹದಿಹರೆಯದವರು ಮತ್ತು ಯುವಕರಲ್ಲಿ ಆತ್ಮಹತ್ಯೆ ಮನೋಭಾವವನ್ನು ತೆಗೆದುಹಾಕುವಂತೆ. |
| ಡಿಸೆಂಬರ್ 10 | : | ಪ್ರಪಂಚದಾದ್ಯಂತ ಚಂಡಮಾರುತ ಗಳು ಮತ್ತು ಭೂಕಂಪ ಗಳಂತಹ ನೈಸರ್ಗಿಕ ವಿಪತ್ತುಗಳ ತಡೆಗಟ್ಟುವಿಕೆಗಾಗಿ. |
| ಡಿಸೆಂಬರ್ 11 | : | ಎಲ್ಲಾ ಧರ್ಮಗಳಲ್ಲಿ ಐಕ್ಯತೆಗಾಗಿ. |
| ಡಿಸೆಂಬರ್ 12 | : | ನಮ್ಮ ಸೇವೆಯು ವಿಸ್ತಾರ ವಾಗುವಂತೆ ಮತ್ತು ಪ್ರಪಂಚ ದಾದ್ಯಂತಹ ಸುವಾರ್ತೆಯು ಹರಡುವಂತೆ. |
| ಡಿಸೆಂಬರ್ 13 | : | ಎಲ್ಲಾ ಪಾಲಕರಿಗೆ ತಮ್ಮ ಯೌವನಸ್ಥ ಮತ್ತು ಚಿಕ್ಕಮಕ್ಕಳನ್ನು ದೈವತ್ವದ ಮಾರ್ಗದಲ್ಲಿ ನಡೆಸುವಂತೆ. |
| ಡಿಸೆಂಬರ್ 14 | : | ಪ್ರಪಂಚದ ಎಲ್ಲಾ ಕ್ರೈಸ್ತರಲ್ಲಿ ದೊಡ್ಡ ಉಜ್ಜೀವನಕ್ಕಾಗಿ. |
| ಡಿಸೆಂಬರ್ 15 | : | ಭಾರತ ದೇಶದ ಮಣಿಪುರ ರಾಜ್ಯದಲ್ಲಿ ಶಾಂತಿ ಐಕ್ಯತೆಯು ಮತ್ತೆ ತಿರುಗಿಬರುವಂತೆ. |
| ಡಿಸೆಂಬರ್ 16 | : | ನಮ್ಮ ಮುಖ್ಯ ಸಭೆಯ ಮತ್ತು ಶಾಖ ಸಭೆಯ ಎಲ್ಲಾ ವಿಶ್ವಾಸಿಗಳ ಒಳ್ಳೆಯ ಆರೋಗ್ಯ ಕ್ಕಾಗಿ ಮತ್ತು ದೈವತ್ವದ ಸಂರಕ್ಷಣೆಗಾಗಿ. |
| ಡಿಸೆಂಬರ್ 17 | : | ನಮ್ಮ ಆತನ **ಕರೆಯ ಪ್ರತಿಧ್ವನಿಯ** ಸೇವೆಯ ಯೂಟುಬ್ ಸೇವೆಯ ಮೂಲಕ ಅಸಂಖ್ಯ ಆತ್ಮಗಳು ರಕ್ಷಣೆಹೊಂದುವಂತೆ. |
| ಡಿಸೆಂಬರ್ 18 | : | ನಮ್ಮ **ಗ್ಲೋಬಲ್ ವಿಷನ್ ಪಾರ್ ಯುತ್ ಮತ್ತು ಸೇವೆಯಲ್ಲಿ** ಇನ್ನೂ ಆನೇಕ ಜನರು ನೋಂದಾಯಿಸುವಂತೆ, ಈ ಸಂತತಿಯ ಮಕ್ಕಳಿಗಾಗಿ ಹಾಗು ಯೌವ್ವನಸ್ಥರಿಗಾಗಿ. |

*(4ನೇ ಪುಟದಿಂದ)*

ಆದರೆ ಆತನು ಮೊದಲು ಯುದ್ಧದಲ್ಲಿ ಸವಾಲನ್ನು ಎದುರಿಸಬೇಕಾಗಿತ್ತು. ಇದು ನಮ್ಮ ಸ್ವಂತ ಜೀವನವನ್ನು ಅನೇಕ ರೀತಿಯಲ್ಲಿ ಸಮಾನಾಂತರಗೊಳಿಸುತ್ತದೆ. ಅನೇಕ ಸಾರಿ ನಮ್ಮ ಮುಂದೆ ಇರುವ ಆಶೀರ್ವಾದಗಳ ಮೇಲೆ ಕೇಂದ್ರಿಕರಿಸುವ ಬದಲು ಯುದ್ಧಗಳಿಂದ ದೂರ ಹೋಗುತ್ತೇವೆ. ಯುದ್ಧದಲ್ಲಿ ಗೋಲಾತ್ಯನನ್ನು ಎದುರಿಸಲು ದೇವರು ದಾವಿದನನ್ನು ಬಯಸಿದನು. ಅದು ದೇವರ ಯೋಜನೆಯು ಒಂದು ಭಾಗವಾಗಿತ್ತು. ಏನೇ ಹಾಗಲಿ ನಮ್ಮ ಜೀವಿತದಲ್ಲಿ ದೇವರ ಯೋಜನೆಗಳನ್ನು ಅಡ್ಡಿಪಡಿಸುವದಕ್ಕೆ ಸೈತಾನನು ಯಾವಾಗಲೂ ಹುಡುಕುತ್ತಾನೆ.

## 4. ತಿರುಗಲು ಕಲಿಯಿರಿ !

ದಾವಿದನು ವ್ಯಾಮೋಹದಿಂದ ಮತ್ತು ಶ್ರದೆಯಿಂದ ಮಾತನಾಡುತ್ತಿರುವಾಗ, ಅವನು ಒಂದು ಸ್ವರವನ್ನು ಕೇಳಿಸಿಕೊಂಡನು. 1 ಸಮುವೇಲ 17:28ರಲ್ಲಿ ಅಲ್ಲಿ ಈ ರೀತಿಯಾಗಿ ತಿಳಿಸಲ್ಪಟ್ಟಿದೆ, ಅವನ ಹಿರೀ ಅಣ್ಣನಾದ ಎಲೀಯಾಬನು ಕೇಳಿ ಕೋಪಗೊಂಡು **ನೀನು ಇಲ್ಲಿಗೆ ಬಂದದ್ದೇಕೆ? ಅಡವಿಯಲ್ಲಿರುವ ನಾಲ್ಕಾರು ಕುರಿಗಳನ್ನು ಯಾರಿಗೊಪ್ಪಿಸಿ ಬಂದಿ?** ನಿನ್ನ ಸೊಕ್ಕನ್ನು ತುಂಟತನವನ್ನು ನನಗೆ ಗೊತ್ತಿದೆ. ನೀನು ಯುದ್ಧವನ್ನು ನೋಡುವದಕ್ಕೆ ಬಂದಿದ್ದೀ ಎಂದು ಅವನನ್ನು ಗದರಿಸಲು. ದಾವಿದನ ಮೇಲಿನ ಈ ಆರೋಪವು ತೀಕ್ಷ್ಣ ಮತ್ತು ನೋವನ್ನುಂಟು ಮಾಡಿತು.

ದಾವಿದನು, ಆತನನ್ನು ಯಾಕೆ ಈ ರೀತಿಯಾಗಿ ನಡೆಸಿಕೊಳ್ಳಲಾಗುತ್ತಿದೆ ಅಥವಾ ಅಂತಹ ರೀತಿಯಲ್ಲಿ ಆರೋಪಿಸಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ನಾನೇನು ತಪ್ಪುಮಾಡಿದ್ದೇನು ಎಂದು ಕೇಳುತ್ತಾನೆ. ನಾನು ಮಾತನಾಡಬಾರದೋ ಎಂದು ಪ್ರಶ್ನೆ ಮಾಡಿದನು. ಅಂತಿಮವಾಗಿ, **ಆ ಸನ್ನಿವೇಶದಿಂದ ತಿರುಗುವದಕ್ಕೆ ತೀರ್ಮಾನಿಸಿದನು.** 1 ಸಮುವೇಲ 17:29 ಮತ್ತು 30 ರಲ್ಲಿ ತಿಳಿಸಿದ ಹಾಗೆ ಈ ವಚನವು ನಮ್ಮೊಂದಿಗೆ ಅನುರಣಿಸುತ್ತದೆ ಯಾಕೆಂದರೆ ಕೆಲವೊಮ್ಮೆ ನಾವು **ದೂರವಿರಲು** ಅಥವಾ **ದೂರಹೋಗಲು** ಕಲಿಯ ಬೇಕಾಗುತ್ತದೆ. ನಮ್ಮ ಮಾರ್ಗದಲ್ಲಿ ಬರುವ ಎಲ್ಲಾ ಹೋರಾಟಗಳನ್ನು ಮಾಡಲಿಕ್ಕೆ ನಾವು ವ್ಯಸ್ತವಾಗಿರುವ ಅಗತ್ಯವಿಲ್ಲ.

ದಾವಿದನು ಅಲ್ಲಿ ನಿಂತು ತನ್ನ ಸಹೋದರನೊಂದಿಗೆ ವಾದಮಾಡುವ ಆಯ್ಕೆಯನ್ನು ಹೊಂದಿದ್ದನು. ಸುಳ್ಳು ಆರೋಪಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳ ಬಹುದಾಗಿತ್ತು. ಅವನಿಗೆ ಎಲ್ಲಾ ಅಧಿಕಾರವಿತ್ತು. ಅವನು ಅನೇಕ ಜನರ ಮುಂದೆ ದೂಷಿಸಲ್ಪಟ್ಟನು ಎಂದು ಪರಿಗಣಿಸಿ. ಏನೇ ಹಾಗಲಿ, ಹೋರಾಟ ಮಾಡುವದಕ್ಕೆ ದಾವಿದನು ಆರಿಸಿಕೊಳ್ಳಲಿಲ್ಲ. ಬದಲಾಗಿ ಅಲ್ಲಿಂದ ಹೋದನು.

## 5. ರಣರಂಗದಲ್ಲಿ ನಿಮ್ಮ ಹೋರಾಟವನ್ನು ವ್ಯರ್ಥ ಮಾಡಬೇಡಿರಿ !

ಪ್ರೀತಿಯ ಸ್ನೇಹಿತರೇ, ಕೆಲವು ಸನ್ನಿವೇಶಗಳಿಂದ ದೂರವಿರಲು ದೇವರು ನಮಗೆ ದೂರ ಹೋಗಲು ಬುದ್ಧಿವಂತಿಕೆಯನ್ನು ನೀಡಲಿ. ನೀವೆಲ್ಲರೂ ಹೆಚ್ಚಿನ ಉದ್ದೇಶಕ್ಕಾಗಿ ಕರೆಯಲ್ಪಟ್ಟಿದ್ದೀರೀ. ನೀವು ಯಾವುದಕ್ಕಾಗಿ ಕರೆಯಲ್ಪಟ್ಟಿದ್ದಿರೋ ಅದರಿಂದ ಎಲಿಯಾಬನ ಮಾತುಗಳು ನಿಮ್ಮನ್ನು ತಬ್ಬಿಬ್ಬುಗೊಳಿಸದಿರಲಿ. ನಮ್ಮ ಜೀವಿತದಲ್ಲಿ ಎಲಿಯಾಬಗಳ ವಿರೋಧವಾಗಿ ಹೋರಾಟ ಮಾಡುವ ಬದಲು, ನಮ್ಮ ಸಾಮರ್ಥ್ಯಗಳನ್ನು ಗೊಲ್ಯಾತಗಳ ಮೇಲೆ ಕೇಂದ್ರಿಕರಿಸಬೇಕು. ನಾನು ಕರ್ತನಿಗೋಸ್ಕರ ಜೀವಿಸಲು ಮಹತ್ವದ ನಿರ್ಧಾರಗಳನ್ನು ತೆಗೆದು ಕೊಳ್ಳುವಾಗ ಅಡೆತಡೆಗಳು ಮತ್ತು ವಿರೋಧಗಳನ್ನು ಎದುರಿಸವುದು ಸಾಮನ್ಯವಾಗಿದೆ. ಈ ಅಡೆತಡೆಗಳು ಎಲಯಾಬನ ತರಹದ ಜನರಿಂದ ಬರುತ್ತೇವೆ. ಏನೇ ಹಾಗಲಿ, ಅವರ ವಿರೋಧಗಳು ಮತ್ತು ನಕಾರತ್ಮಕಗಳು ನಮ್ಮ ನುಂಗುವುದು, ನಮ್ಮ ಅತ್ಯಾಸಕ್ತಿ, ಸಮರ್ಪಣೆ, ಮತ್ತು ಉತ್ಸಾಹವು ಕುಗ್ಗಬಹುದು.

ಎಲಿಯಾಬನ ಅರೋಪಗಳನ್ನು ನಾವು ಈಗ ನೋಡೋಣ :

ಇಲ್ಲಿಗೆ ಯಾಕೆ ಬಂದಿಯಾ? ಅಡವಿಯಲ್ಲಿರುವ ನಾಲ್ಕಾರು ಕುರಿಗಳನ್ನು ಯಾರಿಗೊಪ್ಪಿಸಿ ಬಂದಿ?



*Eliab asked questions to David*

ನಿನ್ನ ಸೊಕ್ಕು ತುಂಟತನವೂ ನನಗೆ ಗೊತ್ತಿದೆ. ನೀನು ಯುದ್ಧವನ್ನು ನೋಡುವದಕ್ಕೆ ಬಂದಿದ್ದೀ.

ದಾವಿದನು ಅವನ ಎಲ್ಲಾ ಆರೋಪಗಳಿಗೆ ಉತ್ತರಿಸು ವದಾದರೆ, ಅವನು ಗೊಲ್ಯಾತನೊಂದಿಗೆ ಹೋರಾಟ ಮಾಡುವ ಬದಲು ಎಲಾಯಬನೊಂದಿಗೆ ಯುದ್ಧ ಮಾಡಬೇಕಾಗಿತ್ತು. ಯುದ್ಧಭೂಮಿಗೆ ಬಂದತಹ ಉದ್ದೇಶವು ನೇರವೇರುತ್ತಿರಲಿಲ್ಲ. ಗೊಲ್ಯಾತನ ವಿರೋಧವಾಗಿ ಹೋರಾಟ ಮಾಡುವದಕ್ಕೆ ದೇವರು ನಿನ್ನನ್ನು ಕರೆಯುವಾಗ, ಎಲಿಯಾಬಗಳೊಂದಿಗೆ ಸಮಯುವನ್ನು ವ್ಯರ್ಥಮಾಡಬೇಡಿರಿ. ನಿಮ್ಮ ಹೋರಾಟಗಳನ್ನು ಬುದ್ಧಿವಂತಿಕೆಯಿಂದ ಆರಿಸಿಕೊಳ್ಳಿರಿ. ನಮ್ಮ ಹೋರಾಟವು ಈ ಲೋಕದ ಎಲಿಯಾಬಗಳೊಂದಿಗೆ ಅಲ್ಲ. ಆದರೆ ಗೊಲ್ಯಾತಗಳೊಂದಿಗೆ ನಮ್ಮ ಹೋರಾಟವು. ತಿರುಗಿ ಹೋಗುವದಕ್ಕೆ ಕಲಿಯಿರಿ.

*(9ನೇ ಪುಟಕ್ಕೆ)*

**NEHEMIAH BIBLE**
**EVENING COLLEGE**
Chepauk & Santhoshapuram, Chennai.
Medium :Tamil
*Registered Candidate for Membership*
Asia Theological Association (ATA)
Recognised by International Christian Leaders & Senior Pastors for the past 54 years
Certificate in Ministry
Diploma in Theology
Qualification : 10th Standard & above
Rush for admission!
Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

# PLEASE PRAY FOR OUR MINISTRIES AT THE HEAD QUARTERS

1. Prayer Service : 24 hours
2. **BIBLECOR -** Bible Correspondence Courses : English, Tamil & Hindi
3. **ECHO OF HIS CALL** - Monthly Magazines : English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
4. Nehemiah Bible Colleges (Three Centres) (Evening / Residential)
5. Theological Correspondence Courses: English & Tamil
6. Great Commission Partners (Network of Pastors)
7. Training Programmes
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools : 8.30 a.m. & 4.00 p.m. Sunday
13. **Tamil Services : 8.00 a.m. & 10.00 a.m. Sunday**
14. **Hindi Service : 4.00 p.m. Sunday**
15. **Telugu Service : 5.00 p.m. Sunday**
16. **English & Tamil Service : 6.00 p.m. Sunday**
17. Women's Prayer : 5.30 p.m. Wednesday
18. Men's Prayer : 7.00 p.m. Friday
19. Discipleship Meeting : 6.00 p.m. Saturday
20. House Meetings : 6.30 p.m. Tuesday & Thursday
21. Special Holy Communion : 6.00 a.m. 1st day of each month
22. Ministers Review Meeting : 5.30 p.m. First Saturday
23. Parents' Prayer : 4.00 p.m. First Sunday
24. Night Prayer : 9.30 p.m. Second Friday
25. Fasting Prayer : 9:30 a.m. Third Saturday
26. Holy Communion : Second Sunday Services
27. Youth / Kid Prayer : 10.00 p.m. daily
28. Staff Devotion : 9.00 a.m. daily
29. Office : 9.00 a.m. to 9.00 p.m. (except Sundays)

## Echo of His Call Postal Courses for candidates in India only

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a course book entitled **New Life – For You!** **After the completion of this course, you will get a certificate. There will be no compulsory fees. You will be blessed!**

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**

**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | |
|---|---|
| **Account Name** | : **ECHO OF HIS CALL EDUCATIONAL TRUST** |
| **Account Number** | : **1023 2923 805** |
| **Bank Name** | : **STATE BANK OF INDIA** |
| **Branch** | : **TRIPLICANE, CHENNAI - 600 005** |
| **IFSC Code** | : **SBIN 0000249** |
| **SWIFT Code** | : **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

“ಯಾರು ಓದುತ್ತಾರೋ ಅವರೇ ಅರ್ಥವಾಗಲಿ” (ಮತ್ತಾಯ 24:15)

## ಆತನ ಉದ್ದೇಶವನ್ನು ಆತನಿಂದ ತಡೆಹಿಡಿಯಲಾಗುವುದಿಲ್ಲ!

## NO PURPOSE OF HIS CAN BE WITHHELD FROM HIM!

1969ರಲ್ಲಿ ನಾನು ಕರ್ತನಾದ ಯೇಸುಕ್ರಿಸ್ತನನ್ನು ನನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಾಗ, ಆತನ ಬರುವಿಕೆಯ ಸಂಪಾದಕರಾದ ಪಾಸ್ಟರ್ ಎಸ್ ದೇವದಾಸನ್‌ರವರ ಸೇವೆಯಲ್ಲಿ ಸೇರಿಕೊಂಡೆನು. ಆತನು ನನಗೆ ಸೇವೆಯನ್ನು ಮಾಡುವದಕ್ಕೆ ಅತ್ಮೀಯ ತರಬೇತಿಯನ್ನು ಕೊಟ್ಟನು ಮತ್ತು ಅವರ ಸಂಗಡ ಮೂರು ವರ್ಷ ಇದ್ದೇನು.



*Pr. S. Sam Selva Raj & Rev. S. Devadasan*

ಒಂದು ರಾತ್ರಿ ನಾನು ಅತನೊಂದಿಗೆ ಬಹಳ ಸಮಯ ಪ್ರಾರ್ಥನೊಂದಿಗೆ ಕಳೆದೆನು. ತಕ್ಷಣ ಅತನು ನನ್ನ ಬಗ್ಗೆ ಮತ್ತು ಈ ಲೋಕದ ಭವಿಷ್ಯತನ ಬಗ್ಗೆ ಹೇಳುವದಕ್ಕೆ ಪ್ರಾರಂಭಿಸಿದನು. ಭವಿಷ್ಯತ್ತನಲ್ಲಿ ನನ್ನ ಮೂಲಕ ದೇವರು ಏನು ಮಾಡುತ್ತಾನೆ ಎಂದು ತಿಳಿಸಿದನು. ಆತನು ದೊಡ್ಡ ಸಂಗತಿಗಳನ್ನು ತಿಳಿಸಿದನು. ಆ ಒಂದು ಸಮಯದಲ್ಲಿ ಆ ಒಂದು ಸಂಗತಿಗಳನ್ನು ನಾನು ಯೋಚನೆ ಮಾಡಲಿಕ್ಕೆ ಆಗಲಿಲ್ಲ. ನನಗೆ ಯಾವುದೇ ಶೈಕ್ಷಣಿಕ ಅರ್ಹತೆಗಳು ಇರಲಿಲ್ಲ ಅಥವಾ ಹಣ ಅಥವಾ ಭವಿಷ್ಯದಲ್ಲಿ ನಾನು ಮಾಡುತ್ತೇನೆ ಎಂದು ಅವರು ಭವಿಷ್ಯ ನುಡಿದ ಮಹಾನ್ ಸೇವಕರುಗಳನ್ನು ನಿರ್ವಹಿಸಲು ಮಾನವ ಶಕ್ತಿ! ನನ್ನ ಎಲ್ಲಾ ಕೊರತೆಗಳನ್ನು ಅವರಿಗೆ ವಿವರಿಸಿದೆನು. ಪಾಸ್ಟರ್ ನಾನು ಕರ್ತನ ಸೇವೆಯಲ್ಲಿ ಕನಿಷ್ಠ ಸೇವಕನಾಗಿ ಉಳಿದರೆ ಸಾಕು ಎಂದು ಹೇಳಿದೆನು. ಒಬ್ಬ ಸಾಮಾನ್ಯ ಮನುಷ್ಯನನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ಯಲು ಎರಡು ವಿಷಯಗಳ ಅಗತ್ಯವಿದೆ ಎಂದು ಅವರಿಗೆ ಉತ್ತರಿಸಿದರು. ಅವುಗಳು **ನಂಬಿಕೆ** ಮತ್ತು **ಒಳ್ಳೆಯ ಮನಸಾಕ್ಷಿ** 1 ತಿಮೋಥಿ 1:19ರಲ್ಲಿ ತಿಳಿಸಲ್ಪಟ್ಟಿದೆ. ನೀವು ನಿಮ್ಮ ಸ್ವಂತ ಕಣ್ಣುಗಳನ್ನು ಇಟ್ಟುಕೊಳ್ಳುವಂತೆ ಅವುಗಳನ್ನು ಸುರಕ್ಷಿತವಾಗಿರಿಸಲು ನೀವು ಜಾಗರೂಕರಾಗಿರಬೇಕು. ನೀವು ಈ ಎಲ್ಲಾ ಅಧ್ಯಾತ್ಮಿಕ ಪದನ್ನೋತಿ ಪಡೆಯುವುದು ಖಚಿತ. ನಾನು ಈಗಾಗಲೇ ತಿಳಿಸಿದ ಹಾಗೆ. ಈ ಎಲ್ಲಾ ವರ್ಷಗಳಲ್ಲಿ ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ವಿಷಯಗಳನ್ನು ನೋಡಿಕೊಳ್ಳಲು ಕರ್ತನು ನನಗೆ ಸಹಾಯ ಮಾಡಿದ್ದಾನೆ.

ಈ ಲೇಖನವನ್ನು ಬರೆಯುವದಕ್ಕೆ ಮುಂಚಿತವಾಗಿ ಕರ್ತನು ನನ್ನೊಂದಿಗೆ ಮಾತನಾಡಿದನು. ಆತನ ಮೃದುವಾದ ಪಿಸುಗುಟ್ಟುವ ಧ್ವನಿಯನ್ನು ಕೇಳಿ ನಾನು ಮೂಕನಾದೆನು. ಆತನು ನನಗೆ ಈ ರೀತಿಯಾಗಿ ಹೇಳಿದನು, ನನ್ನ ಪ್ರೀತಿಯ ಮಗ, ನೀನು ನಿಂತಿರುವ ಈ ಕಟ್ಟಡದ ಬಗ್ಗೆ ಸ್ವಲ್ಪ ಯೋಚಿಸು. ಇದನ್ನು ಹೇಗೆ ಪಡೆದುಕೊಂಡೆ? ಈ ಕಟ್ಟಡಗಳಲ್ಲಿ ನಡೆಯುವಂತಹ ಸೇವೆಗಳನ್ನು ಯೋಚಿಸಿ ನೋಡು. ಕೆಳಗಿನ ಮಾಳಿಗೆ ಯಲ್ಲಿರುವ ಇತ್ತೀಚಿನ ತಂತ್ರಜ್ಞಾನದ ಸುವಾರ್ತೆಯ ಮುದ್ರಣಾಲಯವನ್ನು ನೋಡು! 24 ಗಂಟೆಗಳ ಪ್ರಾರ್ಥನೆ ಸೇವೆಯನ್ನು ಮಾಡುತ್ತಿರುವ ನನ್ನ ಸಭೆಯನ್ನು ನೀನು ಎಂದಾದರೂ ಯೋಚಿಸಿದ್ದಿಯಾ? **ನೆಹಮೀಯ ಸತ್ಯವೇದ ಕಾಲೇಜಿನ** ಸೇವೆಯ ಬಗ್ಗೆ ಎಂದಾದರೂ ಯೋಚಿಸಿದ್ದೀಯಾ ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಯೌವ್ವನಸ್ಥರ ಸೇವೆಗಳನ್ನು ನಡೆಸಲಾಗುತ್ತದೆ, ಮೊದಲನೆಯ ಮಹಡಿಯ ಇನ್ನೊಂದು ಕೋಣೆಯಲ್ಲಿ. ಎರಡನೇಯ ಮಹಡಿಯಲ್ಲಿ ಆತನ **ಕರೆಯ ಪ್ರತಿಧ್ವನಿ**ಯ ಆಡಳಿತ ಕಛೇರಿಯು ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಎಂದಾದರೂ ಯೋಚಿಸಿದ್ದೀಯಾ?

ನಿನ್ನ ಶಕ್ತಿಯನ್ನು ಮೀರಿ ಸೇವೆಗಳನ್ನು ಮಾಡುವದಕ್ಕೆ ನಾನು ನಿನಗೆ ಆರೋನ ಮತ್ತು ಯೋಹೂಶುವಗಳನ್ನು ಕೊಟ್ಟಿದ್ದೇನೆ. ನಿನಗಿಂತ ಹೆಚ್ಚು ದಕ್ಷ ಮತ್ತು ಬುದ್ದಿವಂತರು ಆಗೊಮ್ಮೆ ಈಗೊಮ್ಮೆ ನಿನಗೆ ಸಹಾಯ ಮಾಡುತ್ತಾರೆ ಮತ್ತು ನಿಮ್ಮನ್ನು ಆಶೀರ್ವದಿಸಿದ್ದಾರೆ. ಈ ಆಶೀರ್ವಾದಗಳ ಬಗ್ಗೆ ನೀನು ಆಲೋಚನೆ ಮಾಡುವದಿಲ್ಲ. ನಿನ್ನ ಬಗ್ಗೆ ನಾನು ಯಾವಾಗಲು ಚಿಂತಿಸುತ್ತೇನೆ. ನಾನು ನಿನ್ನನ್ನು ಕರೆದಾಗ ನೀನು ಹೇಗೆ ಇದ್ದೀಯಾ? ಈಗ ಹೇಗೆ ಇದ್ದೀಯಾ? ನಾನು ನಿನ್ನ ಸೇವೆಯನ್ನು ಇನ್ನೂ ವಿಸ್ತಾರ ಮಾಡುತ್ತೇನೆ. ನನ್ನ ದಾಸನಾದ ಪಾ. ಎಸ್ ದೇವದಾಸನ್ ಕಲಿಸಿದ ಹಾಗೆ, **ನಿನ್ನ ನಂಬಿಕೆಯಲ್ಲಿ ಸ್ಥಿರವಾಗಿರು ಮತ್ತು ಒಳ್ಳೆಯ ಮನಸಾಕ್ಷಿಯನ್ನು ಇಟ್ಟುಕೊ.** ನಿನ್ನ ಜೀವಿತದಲ್ಲಿ ಬರುವ ಕಷ್ಟಕರವಾದ ದಾರಿಗಳಲ್ಲಿ ಹಾದು ಹೋಗುವಾಗ ನಿರಾಶೆಯಾಗಬೇಡ. ನಾನು ನಿನ್ನನ್ನು ಕರೆದವನಲ್ಲವೇ? ನನ್ನ ಬಾಯಿಂದ ನಿನ್ನೊಂದಿಗೆ ಮಾತನಾಡಿದ್ದೇನೆ. ನನ್ನ ಕೈಯಿಂದ ನೆರವೇರಿಸುವೆನು. ಧೈರ್ಯವಾಗಿರು ಮತ್ತು ಯಾವುದಕ್ಕೂ ಚಿಂತೆಮಾಡಬೇಡ.

ನನ್ನ ಮೂಲಕ ಕರ್ತನು ಮಾಡಿದ ಅಧ್ಭುತ ಕಾರ್ಯಗಳು ಮತ್ತು ದೊಡ್ಡ ಕಾರ್ಯಗಳನ್ನು ಕೆಲವು ಸಮಯಗಳಲ್ಲಿ ನನಗೆ ಅರ್ಥಮಾಡಿಕೊಳ್ಳುವದಕ್ಕೆ ಆಗುವುದಿಲ್ಲ. ಪ್ರೀತಿಯ ಸಹೋದರ ಮತ್ತು ಸಹೋದರಿ, ದೇವರು ನೇಮಿಸಿದ ನಿನ್ನ ಮೇಲಿನ ನಾಯಕರುಗಳಿಗೆ ವಿಧೇಯರಾಗಿರಿ. ಈ ಲೋಕದ ಮಾರ್ಗದಲ್ಲಿ ನಡೆಯ ಬೇಡಿರಿ. ಆದರೆ ಅವರ ನಾಯಕತ್ವಕ್ಕೆ ಅಧೀನವಾಗಿರಿ. ನಿಮ್ಮ ನಂಬಿಕೆಯನ್ನು ಮತ್ತು ಒಳ್ಳೆಯ ಮನಸಾಕ್ಷಿಯನ್ನು ಕಾಪಾಡಿಕೊಳ್ಳಿರಿ. ನೀವು ದೇವರ ಮತ್ತು ನಾಯಕರುಗಳಿಗೆ ಪ್ರಾಮಾಣಿಕರಾಗಿದ್ದರೆ, ನಿಮ್ಮ ಮೂಲಕ ಆತನು ದೊಡ್ಡ ಕಾರ್ಯಗಳನ್ನು ಮಾಡುತ್ತಾನೆ. ಮಹತ್ಕಾರ್ಯಗಳನ್ನು ಮಾಡಲು ದೇವರು ನಿನ್ನನ್ನು ಬಳಸದಂತೆ ಯಾವುದೂ ತಡೆಯುವುದಿಲ್ಲ. ನಾನು ಎಲ್ಲಾ ಘನ ಮಾನ ಮಹಿಮೆಯನ್ನು ದೇವರಿಗೆ ಮಾತ್ರ ಸಲ್ಲಿಸುತ್ತೇನೆ.

★ ★ ★

(6ನೇ ಪುಟದಿಂದ)

## 6. ಮುಂದೆ ಓಡುವುದಕ್ಕೆ ಕಲಿಯಿರಿ !



ನಾವು ಯಾವಾಗ ತಿರುಗಬೇಕು ಮತ್ತು ಯಾವಾಗ ಮುಂದೆ ಓಡಬೇಕೆಂದು ಕಲಿಯ ಬೇಕಾಗಿದೆ. ವ 48ರಲ್ಲಿ ನಾವು ನೋಡುತ್ತೇವೆ. ದಾವಿದನು ಹೋರಾಟದ ಗೆರೆಗೆ ಗೊಲ್ಯಾತ ವಿರೋಧವಾಗಿ ಹೋರಾಟ ಮಾಡುವದಕ್ಕೆ ಓಡಿದನು. ಎಲ್ಲಾರು ಗೊಲ್ಯಾತನಿಂದ ದೂರ ಹೋದರೆ ಆದರೆ ದಾವಿದನು ಗೊಲ್ಯಾತ ಸಂಗಡ ಹೋರಾಡುವದಕ್ಕೆ ಓಡಿದನು. ನಿಮ್ಮ ಹೋರಾಟಗಳನ್ನು ಆರಿಸಿಕೊಳ್ಳುವದಕ್ಕೆ ಕಲಿಯಿರಿ. ನಿರಾಶೆಯ ಮಾತುಗಳನ್ನು ತಿರಸ್ಕರಿಸುವದಕ್ಕೆ ಕಲಿಯಿರಿ. ಆರೋಪಗಳು, ಕೀಳಿರಮೆ ಮತ್ತು ನಿಮ್ಮ ಕರೆಯುವಿಕೆಯಲ್ಲಿ ಕೇಂದ್ರೀಕರಿಸಿರಿ. ನಿಮ್ಮ ಜೀವಿತದ ಉದ್ದೇಶವನ್ನು ಗೊತ್ತುಮಾಡಿಕೊಂಡು ಅದಕ್ಕಾಗಿ ಓಡಿರಿ. ಬಿಟ್ಟು ಕೊಡಬೇಡಿರಿ !

ದಾವಿದನು ತನ್ನ ಇಳಿವಯಸ್ಸಿನಲ್ಲಿ ತನ್ನ ಹೋರಾಟಗಳನ್ನು ಆರಿಸಿಕೊಳ್ಳುವದನ್ನು ಕಲಿತುಕೊಂಡಿದ್ದನು. ದಾವಿದನು ತನ್ನ ಜೀವಿತದ ಕಾಲವೆಲ್ಲಾ ನಿರಂತರವಾಗಿ ಹೋರಾಟಗಳನ್ನು ಮಾಡಿಕೊಂಡು ಬಂದನು. ಕೇವಲ ಯುದ್ಧ ಭೂಮಿಯ ತನ್ನ ವೈರಿಗಳ ಸಂಗಡವಲ್ಲದೆ, ಆದರೆ ತನ್ನ ಆತ್ಮೀಯ ಕುಟುಂಬದ ಸದಸ್ಯರುಗಳೊಂದಿಗೆ.

## 7. ನಿಮ್ಮ ಹೋರಾಟಗಳನ್ನು ಕರ್ತನಿಗೆ ನಿರ್ದೇಶಿಸಿರಿ !

2 ಸಮುವೇಲ 16 ನಾವು ಹಿರಿಯ, ಪರಿಪಕ್ವದ, ದಣಿದ ದಾವಿದನನ್ನು ನಾವು ನೋಡುತ್ತೇವೆ. ಈಗ ದಾವಿದನು ತನ್ನ ರಾಜ್ಯವನ್ನು ಕಸಿದುಕೊಂಡು ಹೋದ ತನ್ನ ಮಗನಾದ ಅಬ್ಸಾಲೋಮ್‌ನಿಂದ ದೂರ ಹೋಗುವದನ್ನು ನೋಡುತ್ತೇವೆ. ಅವನು ತನ್ನ ಮಕ್ಕಳ ಮೇಲೆ ಆತುಕೊಡು ಭಾವಿಸದ ಸಮಯದಲ್ಲಿ, ವಿಶ್ರಾಂತಿ ಪಡೆದು ಅವನು ತನ್ನ ಜೀವನವನ್ನು ಉಳಿಸಿಕೊಳ್ಳಲು ಓಡಬೇಕಾಯಿತು! ದಾವಿದನು ದೈಹಿಕವಾಗಿ, ಮಾನಸಿಕವಾಗಿ ಸವೆದುಹೋಗಿದ್ದನು. ಆ ಸಮಯದಲ್ಲಿ ಶಿಮ್ಮಿ ಭೇಟಿಯಾಗುತ್ತಾನೆ. ಇವನು ಸೌಲನ ಕುಟುಂಬದ ಸದಸ್ಯನಾಗಿದ್ದನು.



*Shimei cursed David*

ಇವನು ಬಲವಾದ ಮಾತುಗಳಿಂದ ಕಿರಿಚಿ ದಾವಿದನಿಗೆ ಶಾಪಹಾಕಿದನು.

**ಅವನು ಶಪಿಸುತ್ತಾ ನಡೆ, ಕೊಲೆಗಾರನೇ, ನೀಚನೇ, ನಡೆ; ಸೌಲನ ರಾಜ್ಯವನ್ನು ಕಸಕೊಂಡು ಅವನ ಮನೆಯವರನ್ನು ಕೊಂದದ್ದಕ್ಕಾಗಿ ಯೆಹೋವನು ನಿನಗೆ ಮುಯ್ಯಿ ತೀರಿಸಿದ್ದಾನೆ; ಆತನು ರಾಜ್ಯವನ್ನು ನಿನ್ನ ಮಗನಾದ ಅಬ್ಶಾಲೋಮನಿಗೆ ಕೊಟ್ಟು ಬಿಟ್ಟನು. ಕೊಲೆಗಾರನೇ, ಇಗೋ, ನಿನಗೆ ಈಗ ತಕ್ಕ ಅಪತ್ತು ಬಂದಿದೆ ಅಂದನು** (2 ಸಮುವೇಲ 16:7,8).

ಇಸ್ರಾಯೇಲ್ಯ ಜನರಿಗಾಗಿ ಮತ್ತು ಸೌಲನ ಕುಟುಂಬಕ್ಕಾಗಿ ಇದನ್ನೆಲ್ಲಾ ಮಾಡಿದ ನಂತರ ದಾವಿದನಿಗೆ ಹೇಗೆ ಅನಿಸಿರಬಹುದು ಎಂದು ನೀವು ಊಹಿಸ ಬಲ್ಲಿರಾ? ಅವನನ್ನು ಇನ್ನೂ ಕೊಲೆಗಾರ ಮತ್ತು ದೇಶದ್ರೋಹಿ ಎಂದು ಆರೋಪಿಸಲಾಗಿದೆ! ದಾವಿದನು ಹಾದುಹೋದಂತೆ ನೋವು, ಸಂಕಟ ನಾನು ಊಹಿಸಿ ಕೊಳ್ಳುವದಕ್ಕೆ ಸಾಧ್ಯವಿಲ್ಲ. ಇದನ್ನು ಓದುವಂತಹ ನೀವುಗಳು, ಈ ರೀತಿಯಾಗಿ ಹೇಳಬಹುದು, ಇದು ನನ್ನ ಜೀವನದಂತೆಯೇ ತೋರುತ್ತದೆ! ಇದನ್ನೆಲ್ಲಾ ಮಾಡಿದ ಮೇಲೆ ನಾನು ಮಾತುಗಳಿಂದ ಕೆಟ್ಟ ಆರೋಪಗಳನ್ನು ಪಡೆದು ಕೊಳ್ಳುತ್ತಾ ಇದ್ದೇನೆ. ನಾನು ಖಂಡಿತವಾಗಿ ಇದಕ್ಕೆ ಅರ್ಹನಲ್ಲ!.

ದಾವಿದನ ಸ್ಥಾನದಲ್ಲಿ ಯಾರಾದರೂ ಇದ್ದದ್ದರೆ ತಮ್ಮನ್ನು ಸಮರ್ಥಿಸಿಕೊಂಡು ಶಿಮ್ಮಿ ವಿರೋಧವಾಗಿ ಜಗಳ ಮಾಡುತ್ತಿದ್ದರು. ಸತ್ಯವಾಗಿ ಒಬ್ಬರಲ್ಲಿ ದಾವಿದನ ಮನುಷ್ಯರು, **ಈ ಸತ್ತ ನಾಯಿ ಅರಸನಾದ ನನ್ನ ಒಡೆಯನನ್ನು ಶಪಿಸುದೇನು? ಅಪ್ಪಣೆಯಾಗಲಿ, ನಾನು ಅವನಿರುವಲ್ಲಿಗೆ ಹೋಗಿ ಅವನ ತಲೆ ಹಾರಿಸಿಕೊಂಡು ಬರುವೆನು ಅಂದನು** (2 ಸಮುವೇಲ 16:9). ಆದರೆ ದಾವಿನ ಉತ್ತರವನ್ನು ನೋಡಿರಿ, ಮತ್ತೇ, ದಾವಿದನು ತನ್ನ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ದೇವರಿಗೆ ಜೋಡಣೆ ಮಾಡುತ್ತಾನೆ. ಅವನು ಮಾತನಾಡಲಿ/ಶಪಿಸಲಿ, **ಒಂದು ವೇಳೆ ಯೆಹೋವನು ನನ್ನ ಕಷ್ಟವನ್ನು ನೋಡಿ ಈ ಹೊತ್ತಿನ ಶಾಪಕ್ಕೆ ಬದಲಾಗಿ ನನಗೆ ಶುಭವನ್ನು ಅನುಗ್ರಹಿಸಾನು ಎಂದು ಹೇಳಿದನು.** 2 ಸಮುವೇಲ 16:12, ಮೂಲಭೂತವಾಗಿ, ನಾನು ಅನುಭವಿಸುತ್ತಿರುವ ನೋವಿಗೆ ಕರ್ತನು ನನಗೆ ಮರು ಪಾವತಿ ಮಡುತ್ತಾನೆ ಎಂದು ಅವನು ಘೋಷಿಸುತ್ತಾನೆ. ದಾವಿದನನ್ನು ಶಪಿಸೆಂದು ಯೆಹೋವನೇ ಅವನಿಗೆ ಅಜ್ಞಾಪಿಸಿದ ಮೇಲೆ ನೀನು ಹೀಗೇಕೆ ಮಾಡಿದಿ ಎಂದು ಅವನನ್ನು ಯಾರು ಕೇಳಬಹುದು ಎಂದು ಉತ್ತರಕೊಟ್ಟನು. 2 ಸಮುವೇಲ 16:10 ನಮಗೆ ಇಂತಹ ಆಶ್ವಾಸನೆ ಇರಬೇಕಾಗಿದೆ. **ಕರ್ತನ ಅಪ್ಪಣೆಯಿಲ್ಲದೆ ನನ್ನ ಜೀವನದಲ್ಲಿ ಏನು ಆಗುವುದಿಲ್ಲ, ಆತನು ಅಪ್ಪಣೆ ಮಾಡಿದರೆ ಅದು ಕೊನೆಯದಾಗಿ ಆಶೀರ್ವಾದ ವಾಗಿರುತ್ತದೆ.**

ಪ್ರೀತಿಯ ಸ್ನೇಹಿತರೇ, ಕರ್ತನ ಕೂಡ ತನ್ನ ಹೋರಾಟಗಳನ್ನು ಆರಿಸಿಕೊಳ್ಳಬೇಕಾಗಿದೆ. ಆತನನ್ನು ಪ್ರಶ್ನೆಸಿದಾಗ, ಸತ್ಯವೇದವು ಹೇಳುತ್ತದೆ ಅತನು ಶಾಂತವಾಗಿದ್ದನು. ಒಂದು ಸಮಯ ಒರತಾಗಿ, ಈ ರೀತಿಯಾಗಿ ನಾವು ಶಾಂತ ವಾಗಿರುವದನ್ನು ನಾವು ಕಲಿಯಬೇಕು. ದೇವರು ನಮಗಾಗಿ ಯುದ್ದ ಮಾಡಲಿ. ನಮ್ಮ ಹೋರಾಟ ಗಳನ್ನು ಆರಿಸಿಕೊಳ್ಳುವಂತೆ ಕರ್ತನು ನಮಗೆ ಕೃಪೆಯನ್ನು ಕೊಡಲಿ. ದೇವರು ದೇವರಾಗಿರಲಿ!

★ ★ ★

## URGENT

We require approximately 1000 Hindi Christian books for **our Nehemiah Bible Colleges**. Kindly inform us about the possibility of obtaining theological Hindi books.

- Pr. S. Sam Selva Raj, Editor
+91-98412 71858

## NEED LIBRARY BOOKS

We are in need of **Tamil,, English and Hindi books** for our Libraries at **St. Paul's Matriculation School and Nehemiah Bible Colleges.** If you have new or old books in good condition and If you have new or old books in good condition and are willing to donate, please get in touch with us.

- Pr. S. Sam Selva Raj, Editor
+91-98412 71858

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

## Echo of His Call

**YouTube**

Please subscribe

Kindly view and subscribe our **Echo of His Call YouTube Channel** when you get time. Thanks.

**- Editor**

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

RNI NO. 70107/98
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th NOVEMBER 2023**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

To

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**